(153) 2

RegdNo B G155

Sri

18—8—1965

ಸತ್ಯವಾದಿ

48th Year
Satyavadi
DAILY
MYSORE 4

ಸಂಸ್ಥಾಪಕರು — ಅರವಿನೆ ಸಿಂಸ್ಕೇದಾರ್ ಎಂ ವಿ ಸುಬ್ಬರಾಯುರು

ಸಂಪಾದಕರು — ಧರ್ಮಪ್ರಚಾರನಿರತ ಎಂ ಎಸ್ ಕೃಷ್ಣರಾವ್

2½ ಪೈಸೆ

ಶ್ರೀ ಕೃಷ್ಣ ಜಯಂತಿ

ಟಿ ನರಸೀಪುರ ತಾಲ್ಲೂ ಕೃಷ್ಣಾ ಪುರದಲ್ಲಿರುವ ಶ್ರೀ ಸಂತಾನ ಗೋಪಾಲ ಕೃಷ್ಣಸ್ವಾಮಿ ಯವರ ಜಯಂತ್ಯುತ್ಸವವು ತಾ|| 21 ರಿಂದ 30 ರವರೆಗೆ ನಡೆಯುವದು.

★

ಆಹಾರ ಸಂಶೋಧನಾಲಯದಲ್ಲಿ

ಮೈಸೂರು— ತಾ|| 19 ರಿಂದ 22 ರವರೆಗೆ ಕೇಂದ್ರ ಆಹಾರ ಸಂಶೋಧನಾಲಯದಲ್ಲಿ ನಡೆಯುವ ಅಕ್ಕಿ ಸಂಬಂಧದ ವಾರ್ತಾನುವಾದ ಕೂಟಕ್ಕೆ 150 ಕ್ಕೂ ಹೆಚ್ಚು ಜನ ಪ್ರತಿನಿಧಿಗಳು ಬರುವರು ; ವಿಜ್ಞಾನಿಗಳು, ಗಿರಣಿಯವರು, ಗಿರಣಿ ಯಂತ್ರತಯಾರಕರು, ರೈತಸಂಘದವರು ಕೇಂದ್ರ ಆಹಾರ ಮತ್ತು ವ್ಯವಸಾಯ ಸಚಿವಾಲಯದವರು, ಫುಡ್ ಕಾರ್ಪೊರೇಷನ್ನಿನವರು ಇರುವರು — ವಿಜ್ಞಾನ ಮತ್ತು ವ್ಯವಸಾಯ ಸಂಶೋಧನಾ ಡೈರೆಕ್ಟರು ಡಾ|| ಹೆ.ಸೇಖ ಜಾಹೀರರು ಉದ್ಘಾಟಿಸುವರು — ಇದರ ಜೊತೆಗೆ ಅಕ್ಕಿ ಮತ್ತು ಅಕ್ಕಿ ಪದಾರ್ಥಗಳಿಗೆ ಸಂಬಂಧಿಸಿದಂತೆ ವಸ್ತುಪ್ರದರ್ಶನವು ಏರ್ಪಡಿಸಲಾಗಿದೆ.

ವಿಶ್ವವೀಕ್ಷಣ

ನ್ಯೂಯಾರ್ಕಿನಲ್ಲಿ ನಡೆಯುತ್ತಿರುವ ವಿಶ್ವವೀಕ್ಷಣದಲ್ಲಿ ರುವಭಾರತೀಯ ವಸ್ತು ಪ್ರದರ್ಶನ ಮಂಟಪವನ್ನು ಬೃಹದಾಕಾರದ ಆಭರಣ ಪೆಟ್ಟಿಗೆ ಎಂದು ಕರೆಯಲಾಗಿದೆ.

ನಾಳೆಯ ಪಂಚಾಂಗ

ದೈವಜ್ಞ ಶಿರೋಮಣಿ
ಆಸ್ಥಾನವಿದ್ವಾನ್ ಧರ್ಮಾಧಿಕಾರಿ
ರಾಜಕಾರ್ಯಾಸಕ್ತ, ಜ್ಯೋತಿರ್ವಿದ್ವನ್ಮಣಿ
ಸಂಪಕ್ಕ ಕೃಷ್ಣಜೋಯಿಸಂವರಿಂದ

19 ಗುರುವಾರ ಸಪ್ತಮಿ ಕೃಷ್ಣ

★

ಶ್ರೀಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ ನಾಳೆ ಸತ್ಯವಾದಿ ಕಾರ್ಯಾಲಯಕ್ಕೆ ರಜವಿದೆ

ನಿತ್ಯ ಸುದ್ದಿ ತಿಳಿಸಿ

ನವದೆಹಲಿ—ಕಾಶ್ಮೀರದಲ್ಲಿನ ಸುದ್ದಿಯನ್ನು ಪ್ರತಿ ದಿನವೂ ಸಭೆಗೆ ತಿಳಿಸುವಂತೆ ರಾಜ್ಯ ಸಭೆಯಲ್ಲಿ ಜನಸಂಘದ ನಾಯಕ ಅತಲ ಬಿಹಾರಿ ವಾಜಪೇಯಿ ಸಲಹೆ ಮಾಡಿದ.

ಪಾಕಿಸ್ತಾನ ದಶ

ನವದೆಹಲಿ — ಹೊರದೇಶದಲ್ಲಿನ ಭಾರತ ರಾಜಕಾರಿ ನಿಪುಣರು ಪಾಕಿಸ್ತಾನದ ಪರ ಕೆಲಸಮಾಡುತ್ತಿರುವರೆಂದು ರಾಜ್ಯ ಸಭೆಯಲ್ಲಿ ಕಾಂಗ್ರೆಸಿನ ಪಟ್ವಾಭಿರಾಮ್ ಹೇಳಿದರು.

★

ಪಾಕಿಸ್ತಾನದ ದುರಾಶೆ

ಗಡಿಯು 24 ನೇ ಸಮಾಂತರದಲ್ಲಿ ಸಮಾರಾಗಿದೆಯೆಂದ ಭಾರತದ ಭೂಮಿಯಲ್ಲಿ ಸ್ವಾ3500 ಚದರ ಮೈಲಿ ಸ್ಥಳಕ್ಕೆ ಪಾಕಿಸ್ತಾನ ಹಕ್ಕೊಡಿದೆ

ಸಬ್‌ವೇ ರೀನುಗಳು

ನವದೆಹಲಿ— ರಷ್ಯಾದಿಂದ ನಾಲ್ಕು ಸಬ್ ವೇರೀನುಗಳನ್ನು ಕೊಳ್ಳಲು ಮಾತುಕತೆ ನಡೆಯುತ್ತಿದೆಯೆಂದು ರಾಜ್ಯಸಭೆಯಲ್ಲಿ ತಿಳಿಸಲಾಯಿತು

ವಿಶ್ವಸಂಸ್ಥೆಯಲ್ಲಿ

ವಿಶ್ವಸಂಸ್ಥೆ— ಪ್ರಧಾನ ಕಾರ್ಯದರ್ಶಿ ಥಾಂಟರು ನಿನ್ನೆ ಭಾರತ ಪ್ರತಿನಿಧಿಯೊಡನೆ ತಾಷ್ ವಿಚಾರದಲ್ಲಿ ಚರ್ಚೆ ನಡೆಸಿದರು — ನಂತರ ಪಾಕಿಸ್ತಾನಿ ಪ್ರತಿನಿಧಿಯೊಡನೆ ಚರ್ಚಿಸಿ ಶಾಂತಿಯುತ ವ್ಯವಸ್ಥೆಗಾಗಿ ಹಿತಬೋಧೆ ಮಾಡಿದರು.

★

ನವದೆಹಲಿ— ಕಾಶ್ಮೀರದಲ್ಲಿ ಪಾಕಿಸ್ತಾನ ಧಾಳಿಕಾರರ ಹಾವಳಿಯ ವಿಷಯ ಅಮೇರಿಕಾ, ರಷ್ಯಾ, ಬ್ರಿಟನ್ನಿಗೆ ತಿಳಿಸಲಾಗಿದೆಯೆಂದು ವಂದೆಪುಗಾಗಿದೆ

ಗೋವಾದ ಸ್ಥಾನಮಾನವು ಹೀಗೇ ಇರಲು ಕೇಳಿಕೆ

★

ಯಕ್ಷಿಣಿ ಕೋಲಿನ ಹೇಳಿಕೆ

ನವದೆಹಲಿ — ದೆಹಲಿಯ ಶಿವಳ್ಳಿ ಸಂಘದವರು ಸ್ವಾತಂತ್ರ್ಯ ದಿನದಂದು ಏರ್ಪಡಿಸಿದ್ದ ಸಮಾರಂಭದಲ್ಲಿ ಮ್ಯಾಜಿಕ್ಕಿಗೆ ಇತ್ತು — ಮಂತ್ರವಾದಿ ಸೀತಾರಾಮಯ್ಯ ಯಕ್ಷಿಣಿ ಕೋಲು ಜನರ ಕೇಳ್ವುತ್ತಿದ್ದ ಪ್ರಶ್ನೆಗಳಿಗೆ ಉಂಟು ಇಲ್ಲ ಎಂದು ಉತ್ತರವನ್ನು ಹೆಂಜ್ಞೆ ಮೂಲಕ ತಿಳಿಸುತ್ತಿತ್ತು : ಆಗ ಒಬ್ಬರು ಭಾರತಕ್ಕೆ ವೆಸ್ಟ್ ಇಂಡೀಸು ಕ್ರಿಕೆಟ್ ಟೀಮು ಬರುವುದು ಉಂಟೇ ? ಎಂದು ಕೇಳಿದನು ! ಇಲ್ಲಾ ಅಂತಾ ಉತ್ತರಿಸಿತು : ಅದಕ್ಕಾಗಿ ಕಳೆದ ವಾರ ಭಾರತ ಸರಕಾರ ವಿದೇಶೀ ವಿನಿಮಯವನ್ನು ಮಂಜೂರ್ಮಾಡಿತು — ನೋಡಬೇಕು, ಏನಾಗುತ್ತೋ ?

★

ಪ್ರತಿಭಟನೆ

ನವದೆಹಲಿ— ಪಾರ್ಲಿಮೆಂಟು ಅಧಿವೇಶನದತರ್ವಾಗ ಎಂ ಪಿ ಗಳನ್ನು ದಸ್ತಗಿರಿ ಮಾಡುವುದು ಪ್ರತಿಭಟಿಸಲಾಗಿದೆ

ಅಲ್ಲೂ ಕಳ್ಳತನ

ಧರ್ಮಶ್ರೀ— ಇಲ್ಲಿ ಒಂದು ದೊಡ್ಡ ಕಾಮ್ರುದ ಪಾತ್ರೆಯನ್ನು ಕದ್ದ ಆಂಥೋಣಿ ಮತ್ತು ಜೋಸಫು ಬಂಧಿಸಲ್ಪಟ್ಟರು.

ಪಂಜಿಂ— ಕಾಂಗ್ರೆಸು ಕೆಲಸಗಾರರು ಗೋವಾ ಲೆ || ಗ್ರ್ನರಿಗೆ ಮನವಿ ಪತ್ರ ಅರ್ಪಿಸಿ ಗೋವಾದ ರಾಜಸ್ವಯ ಸ್ಥಾನಮಾನದ ಬದಲಾವಣೆ ಕೂಡದೆಂದು ತಿಳಿಸಿದರು — ಇವರು ಎಂಡು ತಂಡದಲ್ಲಿ ನಡೆದುಕೊಂಡು ಬಂದಿದ್ದರು, ಒಂದು ಮಾರ್ಗೋವಾದಿಂದ ಮತ್ತೊಂದು ವಾಸ್ಕೋದಿಗಾವುದಿಂದ.

★

ವಿದ್ಯಾರ್ಥಿಗಳ ವಿಜಯ

ಹೈದರಾಬಾದು— ಉಸ್ಮಾನಿಯಾ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಮುಷ್ಕರ ನಿಂತಿತು : ಅವು ಕೇಳಿದ್ದೆ— ಮೊದಲನೇ ವರ್ಷದಲ್ಲಿ ಡಿಟೆಕ್ಟಿವ್ ಪದ್ಧತಿ ರಜಾ ವೇತನ ಪರೀಕ್ಷಾ ಶುಲ್ಕ ಕಡಮೆ ಮಾಡುವುದು, ಇವಕ್ಕೆ ಆಡಳಿತ ವರ್ಗ ಒಪ್ಪಿತು.

ಪಂಜಾಬಿ ಸುಬ್ಬಾ

ನವದೆಹಲಿ— ಪಂಜಾಬಿ ಸುಬ್ಬಾಕಾಂಕ್ಷಿಗಳಿಗೆ ಫತೇಸಿಂಗರು ಪ್ರಾಣಾರ್ಪಣೆ ಮಾಡಿರುವ ವಿಷಯವನ್ನು ಗೃಹಮಂತ್ರಿ ನಂದಾರವರು ಮತ್ತು ಹಲವು ಸಿಕ್ ಎಂ ಪಿ ಗಳು ಪರ್ಜಿಸಿದರು ; ಫಾ ಶ್ರೀ ಸಿಂಗರು ತಮ್ಮ ಜೊತೆ ಪ್ರಾಣಾರ್ಪಣೆಗೆ 60 ಮಂದಿಯಾದರೂ ದೊರೆಯುವರೆಂದು ನಂಬಿದ್ದಾರೆ — ಕಾಂಗ್ರೆಸ್ ಸಿಖ್ಖರು ಇದನ್ನು ವಿರೋಧಿಸುವುದಾಗಿ ತಿಳಿಸಿದಾರೆ

ನವದೆಹಲಿ— ನೀವು ಯಾವಾಗ ಬಂದರೂ ಸುಸ್ವಾಗತವಿದೆ ಎಂದು ಗಡಿನಾಡು ಗಾಂಧಿ ಖಾನ್ ಅಬ್ದುಲ್ ಗಫಾರ್ ಖಾನ್ ರಿಗೆ ಭಾರತ ಸರಕಾರ ತಿಳಿಸಿದೆಯೆಂದು ರಾಜ್ಯಸಭೆಯಲ್ಲಿ ತಿಳಿಸಲಾಯಿತು.

ನೈವೇದ್ಯ ಭುಂಜಿಸಿದ ಗುರುವಾಯೂರಪ್ಪ

—0—

ಭೂಲೋಕದ ವೈಕುಂಠವೆಂದು ಹೆಸರಾಂತ ಗುರುವಾಯೂರು ಕ್ಷೇತ್ರವು ಕೇರಳದ ಅತ್ಯಂತ ಪ್ರಸಿದ್ಧ ಹಾಗೂ ಪುರಾತನ ಕ್ಷೇತ್ರವಾಗಿದೆ ; ಕಲಿಯುಗದಲ್ಲಿ ಭಕ್ತಜನರಿಗೆ ಸುಲಭವಾಗಿ, ಭಕ್ತಿಯಿಂದ ಪೂಜಿಸಿದವರಿಗೆ ಭೇದಭಾವವಿಲ್ಲದೆ ಅಕ್ಷಯವಾದ ಕೃಪಾಕಟಾಕ್ಷವನ್ನು ಬೀರಿ ಸಂತೋಷಪಡಿಸುವ ಸಲುವಾಗಿಯೇ ಮಹಾವಿಷ್ಣುವು ಈ ಕ್ಷೇತ್ರದಲ್ಲಿ ನೆಲೆನಿಂತಿರುವನೆಂಬ ನಂಬಿಕೆ ಅನಾದಿ ಕಾಲದಿಂದಲೂ ಜನತೆಯಲ್ಲಿದೆ.

ಗುರುವಾಯೂರಿನ ಕ್ಷೇತ್ರ ಮಹಾತ್ಮೆಯು ಕೇರಳದ ಮನೆಮನೆಗಳಲ್ಲೂ ಭಕ್ತಜನರು ದಿನವೂ ಸ್ಮರಿಸಿಕೊಳ್ಳುವಂಥ ಒಂದು ಪವಿತ್ರ ಸಂಗತಿಯೆನ್ನಬಹುದು.

ದ್ವಾಪರ ಯುಗದಲ್ಲಿ ಸಾಕ್ಷಾತ್ ಭಗವಂತನನ್ನೇ ಪುತ್ರರೂಪದಲ್ಲಿ ಪಡೆದು ಧನ್ಯರಾದ ವಸುದೇವ ದೇವಕಿಯರಿಗೆ ಧೌಮ್ಯ ಋಷಿಗಳು ಎಲ್ಲಿಂದಬೋ ಶಂದು ನೀಡಿದ ವಿಗ್ರಹವೊಂದನ್ನು ಭಕ್ತದಂಪತಿಗಳು ಅತ್ಯಂತ ಭಕ್ತಿಯಿಂದ ಭಕ್ತಿಯಿಂದ ದ್ವಾರಕೆಯಲ್ಲಿ ಕ್ಷೇತ್ರವೊಂದನ್ನು ನಿರ್ಮಿಸಿ ಅದರಲ್ಲಿಟ್ಟು ಪೂಜಿಸತೊಡಗಿದರು.

ಯಾದವೀ ಕಲಹದಲ್ಲಿ ಈ ಕ್ಷೇತ್ರವು ನಾಶೋನ್ಮುಖವಾಗುವುದನ್ನು ಕಂಡ ದೇವಗುರು ಬೃಹಸ್ಪತಿಗಳು ಉಚಿತ ವೇಳೆಯಲ್ಲಿ ವಾಯುದೇವನ ಸಹಾಯದಿಂದ ಆ ವಿಗ್ರಹವನ್ನು ಅಲ್ಲಿಂದ ತೆಗೆದುಕೊಂಡು ಪ್ರತಿಷ್ಠೆಗೆ ಪ್ರಶಸ್ತವಾದ ಸ್ಥಳವನ್ನು ಅನ್ವೇಷಿಸುತ್ತಾ ಅನ್ವೇಷಿಸುತ್ತಾ ಎಲ್ಲೆಯೂ ಪವರ್ಮಸಮೃದ್ಧ ಭೂಮಿಯನ್ನು ಕಾಣದೆ ದಕ್ಷಿಣ ಭಾರತದ ಪಡುವಣ ಕಡಲ ತೀರವನ್ನು ಸೇರಿದಾಗ ಆ ಪ್ರದೇಶದಲ್ಲಿ ಪರ್ವವು ಬೇರೂರಿದ್ದನ್ನು ಕಂಡರು.

ಅವಲೋಕಿಸಿ ಅದು ಪರಶುರಾಮ ಸೃಷ್ಟಿಯೆಂದು ತಿಳಿದುಕೊಂಡು ಅನಂದ ಪರವಶರಾದರು ; ಆಕ್ಷಣವೇ ಜಲಕ್ರೀಡೆಯಲ್ಲಿ ನಿರತನಾಗಿದ್ದ ಭಗವಾನ್ ಈಶ್ವರನೂ ಆ ಮಹಾವಿಷ್ಣುವಿನ ವಿಗ್ರಹದ ಪ್ರತಿಷ್ಠಾಪನೆಗೆ ಅದೇ ಸ್ಥಳವು ಪ್ರಶಸ್ತವಾದುದೆಂದು ಗುರು ಬೃಹಸ್ಪತಿ ಹಾಗೂ ವಾಯುದೇವನನ್ನು ಒಪ್ಪಿಸಲು ಅವರು ಸಂತೋಷದಿಂದ ವಿಗ್ರಹದ ಪ್ರತಿಷ್ಠೆಗೆ ಮುಂದಾದರು ; ಈತನ ಧೇನುವಿನ ಸಹಾಯದಿಂದ ಸಕಲ ನೈವೇದ್ಯಾದಿ ಪೂಜೆಗಳಿಂದ ವಿಗ್ರಹವನ್ನು ಅಂಕರಿಸಿ, ಏಕಾಕರ್ವನಿಂದ ಕ್ಷೇತ್ರವನ್ನು ನಿರ್ಮಿಸಿದರು ; ಗುರು ಬೃಹಸ್ಪತಿ ಮತ್ತು ವಾಯುದೇವನಿಂದಾಗಿ ಈ ಕ್ಷೇತ್ರ ನಿರ್ಮಿಸಲ್ಪಟ್ಟದರಿಂದ ಇದಕ್ಕೆ ಗುರುವಾಯೂರಪ್ಪನ್ ಗುರುವಾಯೂರು ಎಂಬುದಾಗಿಯೂ ವಿಗ್ರಹದಲ್ಲಿ ಅಭಿಷ್ಟಿಕ್ತನಾದ ಶ್ರೀ ಶ್ರೀ ಗೋಪಾಲಕೃಷ್ಣನಿಗೆ ಗುರುವಾಯೂರಪ್ಪ ಎಂಬುದಾಗಿಯೂ ಹೆಸರಾಯಿತು.

(ಮುಂದುವರಿಯುವುದು)

ವುಡ್‌ಲ್ಯಾಂಡ್ಸ್ 20-8-65 ರಿಂದ

ಅಮೋಘ ಆಕರ್ಷಣೆ

ಕಾಬಿಖಾನ್ (ಹಿಂದಿ) Kabli Khan

ಅಜಿತ್, ಹೆಲೆನ್, ಮುಮ್ತಾಜ್, ಜಯಂತ್ ಪಾತ್ರವಹಿಸಿರುವ

.... ಅತ್ಯಮೋಘ ಹಿಂದಿ ಚಿತ್ರ ....

ಸಂಗೀತ : ಚಿತ್ರಗುಪ್ತ — [ಪ್ರತಿ ದಿನ 3 ಪ್ರದರ್ಶನಗಳು

ಅಪೆರ— 13-7-65 ರಿಂದ

ಸರಸಾ, ಬಿ. ಎ.

ಪಾತ್ರ— ಭಾನುಮತಿ, ಬಾಲರಾಜ್, ಎಂ ಆರ್ ರಾಧಾ, ತಾಯಿ ನಾಗೇಶ್

ಅಮೋಘ ತಮಿಳು ಸಾಂಸಾರಿಕ ಚಿತ್ರ] [ಪ್ರತಿ ದಿನ 3 ಆಟಗಳು

SHAKTI

SUDHA

A Superb Tonic

Quality Printing — Neat Binding

Lakshminarasimha Press

Sivarampet, Mysore

ಆಶೋಕ ಏಜೆನೀಸ್

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧದ ಆಯುರ್ವೇದ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ

ರೋಗಿಗಳಿಗೆ ಸೂಕ್ತ ಔಷಧಿ ಕೊಡಲಾಗುತ್ತದೆ

Protect the Cow



ಗೋಸಂರಕ್ಷಣೆ ಮತ್ತು ವಾಣಿಜ್ಯದಲ್ಲಿ ಕಾರ್ಯಗಳ ಹೆಚ್ಚಳಕ್ಕಾಗಿ ನಡೆಯಲಿ

Help The Gorakshana

ಗೋರಕ್ಷಣೆಕ್ಕೆ ಬೆಂಬಲ ನೀಡಿ

Edited, Printed & Published by Dharmaprachara nirathaM S Krishna Rao (Proprietor) at the Satyavadi PressChamarajapuram, Mysore 4